**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

<u>ಸತ್ರ ಮೊಕದ್ದಮೆ ನಂಃ **54/2025**</u>

| | | |
|---|---|---|
| ಸಾಕ್ಷಿದಾರರ ಹೆಸರು | - ಧರ್ಮೆಗೌಡ | ಪಿಡಬ್ಲೂ -14 |
| ತಂದೆಯ ಹೆಸರು | - ರಂಗೇಗೌಡ | ಸಿಡಬ್ಲೂ -27 |
| ವಯಸ್ಸು | - 54 ವರ್ಷ | |
| ಉದ್ಯೋಗ | - ಎ.ಎಸ್.ಐ., ಮಹಿಳಾ ಪೊಲೀಸ್ ಠಾಣೆ , ಚಿಕ್ಕಮಗಳೂರು | |
| ವಾಸ ಸ್ಥಳ | - ಚಿಕ್ಕಮಗಳೂರು | |

*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 03-01-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ಜೂನ್ 2024 ರಿಂದ ನಾನು ಚಿಕ್ಕಮಗಳೂರು ಮಹಿಳಾ ಪೊಲೀಸ್ ಠಾಣೆಯಲ್ಲಿ ಸಹಾಯಕ ಆರಕ್ಷಕ ಉಪನಿರೀಕ್ಷಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 16-01-2025 ರಂದು ಚಾಸಾ.28 ರವರು

ಚಾಸಾ.25 ರವರೊಂದಿಗೆ ಹಾಸನದ ಹಿಮ್ಸ್ ಆಸ್ಪತ್ರೆಗೆ ಹೋಗಿ ಅಲ್ಲಿ ಒಳರೋಗಿಯಾಗಿ ದಾಖಲಾಗಿದ್ದ ಗಾಯಾಳು ಶಾರದರವರ ಹೇಳಿಕೆಯನ್ನು ಪಡೆದುಕೊಂಡು ಬರುವಂತೆ ಮೌಖಿಕವಾಗಿ ಆದೇಶಿಸಿದ್ದರು. ಅದರಂತೆ ಅದೇ ದಿನ ಮಧ್ಯಾಹ್ನ 12.30 ಗಂಟೆ ಸುಮಾರಿಗೆ ನಾನು ಮತ್ತು ಚಾಸಾ.25 ರವರು ಹಾಸನದ ಹಿಮ್ಸ್ ಆಸ್ಪತ್ರೆಗೆ ಹೋಗಿ ಅಲ್ಲಿನ ವೈದ್ಯಾಧಿಕಾರಿಗಳನ್ನು ಭೇಟಿ ಮಾಡಿ ಗಾಯಗಳು ಹೇಳಿಕೆ ನೀಡುವ ಸ್ಥಿತಿಯಲ್ಲಿರುವ ಬಗ್ಗೆ ವಿಚಾರಿಸಿದೆವು. ಸದರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ಗಾಯಾಳು ಶಾರದರವರು ಹೇಳಿಕೆ ನೀಡುವ ಸ್ಥಿತಿಯಲ್ಲಿ ಇಲ್ಲವೆಂದು ತಿಳಿಸಿದರು. ವೈದ್ಯರು ಆ ರೀತಿ ತಿಳಿಸಿದ ಮೇರೆಗೆ ಸದರಿ ಆಸ್ಪತ್ರೆಯಲ್ಲಿ ಗಾಯಾಳು ಶಾರದರವರನ್ನು ನೋಡಿಕೊಳ್ಳಲು ಇದ್ದ ಅವರ ತಾಯಿಯಾದ ಪ್ರಾಸಾ.1 ಸಿದ್ದಮ್ಮ ಕೋಂ ವೆಂಕಟೇಶ್ ರವರ ಹೇಳಿಕೆಯನ್ನು ಮಧ್ಯಾಹ್ನ 1 ಗಂಟೆಯಿಂದ 2.30 ಗಂಟೆಯವರೆಗೆ ಸದರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಪ್ರಾಸಾ.9 ರವರ ಸಮಕ್ಷಮ ಪಡೆದುಕೊಂಡೆವು. ಪ್ರಾಸಾ.1 ರವರು ಹೇಳಿದಂತೆ ನಾನು ಉಕ್ತಲೇಖನ ಕೊಟ್ಟ ಮೇರೆಗೆ ಚಾಸಾ.25 ರವರು ಅವರ ಹೇಳಿಕೆಯನ್ನು ತಮ್ಮ ಬರವಣಿಗೆಯಲ್ಲಿ ದಾಖಲು ಮಾಡಿದರು.

3. ನಂತರ ಅದೇ ದಿನ ಸಂಜೆ 6.30 ಗಂಟೆಗೆ ಠಾಣೆಗೆ ವಾಪಸ್ ಆಗಿ ಸದರಿ ಹೇಳಿಕೆಯನ್ನು ಚಾಸಾ.28 ರವರಿಗೆ ನೀಡಿದೆನು. ಸದರಿ ಹೇಳಿಕೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಹೇಳಿಕೆಯನ್ನು ಈಗಾಗಲೇ

ನಿಪಿ.1 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಜಿ.ಎಸ್.ಎಸ್. ವಕೀಲರಿಂದಃ

4. ಚಾಸಾ.28 ರವರ ಸೂಚನೆಯ ಮೇರೆಗೆ ನಾನು ಮತ್ತು ಚಾಸಾ.25 ರವರು ಬೆಳಿಗ್ಗೆ 8 ಗಂಟೆಗೆ ಠಾಣೆಯಿಂದ ಹೊರಟು ಮಧ್ಯಾಹ್ನ 12.30 ಗಂಟೆ ಸುಮಾರಿಗೆ ಹಾಸನದ ಹಿಮ್ಸ್ ಆಸ್ಪತ್ರೆಗೆ ಹೋಗಿದ್ದೆವು. ಯಾವ ವಾಹನದಲ್ಲಿ ಅಲ್ಲಿಗೆ ಹೋದಿರಿ ಎಂದರೆ ಸಾಕ್ಷಿ ಸರ್ಕಾರಿ ಬಸ್ಸಿನಲ್ಲಿ ಎನ್ನುತ್ತಾರೆ. ಹಾಸನಕ್ಕೆ ಚಿಕ್ಕಮಗಳೂರಿಂದ 60 ಕಿ.ಮೀ. ದೂರವಾಗುತ್ತದೆ ಎಂದರೆ ಸರಿ. ಸದರಿ ದೂರವನ್ನು ಕ್ರಮಿಸಲು ಒಂದು ಗಂಟೆ ಸಾಕಾಗುತ್ತದೆ ಎಂದರೆ ಸಾಕ್ಷಿ ನಾವು ಹೋಗಿದ್ದು ಸರ್ಕಾರಿ ಬಸ್ಸಿನಲ್ಲಿ, ನಾವು ಹೋದ ಕೂಡಲೇ ಬಸ್ ಸಿಗಲಿಲ್ಲ, ಕಾದು ಹೋಗಿದ್ದೇವೆ ಎನ್ನುತ್ತಾರೆ. ನಾವು ಅಲ್ಲಿಗೆ ಹೋದಾಗ ಗಾಯಾಳು ಶಾರದರವರನ್ನು ಐ.ಸಿ.ಯು. ನಲ್ಲಿ ಇರಿಸಲಾಗಿತ್ತು.

5. ಹೇಳಿಕೆಯನ್ನು ಎಷ್ಟು ಪುಟಗಳಲ್ಲಿ ದಾಖಲಿಸಲಾಯಿತು ಎಂದರೆ ಸಾಕ್ಷಿ ಒಂದೂವರೆ ಪುಟಗಳಲ್ಲಿ ಎನ್ನುತ್ತಾರೆ. ನಾವು ಅಲ್ಲಿಗೆ ಹೋದಾಗ ಶಾರದರವರೊಂದಿಗೆ ಅವರ ತಾಯಿಯನ್ನು ಬಿಟ್ಟು ಬೇರೆ ಯಾರು ಇರಲಿಲ್ಲ. ನಾವು ಅಲ್ಲಿಗೆ ಹೋದಾಗ ಶಾರದರವರು ಹೇಳಿಕೆ ಕೊಡುವ ಸ್ಥಿತಿಯಲ್ಲಿರಲಿಲ್ಲ. ನೀವು ಹೇಳಿದಂತೆ ನೀವು ಮತ್ತು ಚಾಸಾ.25 ರವರು ಹಾಸನ ಜಿಲ್ಲಾ ಆಸ್ಪತ್ರೆಗೆ ಹೋಗಿಲ್ಲ, ಅಲ್ಲಿ ಫ್ರಾಸಾ.1 ರವರಿಂದ ನಿಪಿ.1 ರಂತೆ

ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಠಾಣೆಯಲ್ಲಿಯೇ ಸದರಿ ಹೇಳಿಕೆಯನ್ನು ತಯಾರಿಸಿ ಸಹಿ ಪಡೆದಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ಕರ್ತವ್ಯ ನಿರ್ವಹಿಸದಿದ್ದರೂ ಸಹ ತನಿಖಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ